# ನವಿಲುಗನ್ನಡಿ

ಮೇ ತಿಂಗಳ 'ಮಯೂರ' ಮುದ್ದಾಗಿದೆ. ವಸುಮತಿ ಉಡುಪ ಅವರ 'ಮೆಟ್ಟುಗತ್ತಿ' ಪ್ರಬಂಧ ಉತ್ತಮ ಓದಿನ ಅನುಭವ ಕೊಟ್ಟಿತು. ಜಯಶ್ರೀ ಕಾಸರವಳ್ಳಿ ಕತೆ 'ಗಡಿಯಾರದಡಿಯಲ್ಲಿ' ತುಂಬಾ ಹಿಡಿಸಿತು. ಉಳಿದ ಕತೆಗಳೆಲ್ಲ ಚೆನ್ನಾಗಿದ್ದವು, ಭಿನ್ನವಾಗಿದ್ದವು.

**ಪಾಂಡವಪುರ ಮೃತ್ಯುಂಜಯ, ಮಡಿಕೇರಿ**

ಉಷಾ ನರಸಿಂಹನ್ ಅವರ ಕತೆ 'ಹೊಸಜೀವನ ಡಾಟ್ ಕಾಂ' ಓದಿಸಿಕೊಂಡು ಹೋಯಿತು. ಅದೇ ರೀತಿ ಪತ್ತೇದಾರಿ ಕತೆ '2ನೇ ಕೂಗು' ಅಷ್ಟೇನೂ ರೋಮಾಂಚಕ ಎನ್ನಿಸಲಿಲ್ಲ. 'ಹುದಲು' ಮತ್ತು 'ವದ್ದಾ...' ಕತೆಗಳು ಚೆನ್ನಾಗಿದ್ದವು.

**ಬಿ.ಆರ್. ಅಣ್ಣಾಸಾಗರ**

ಈ ಸಂಚಿಕೆಯ ಗರಿ ಎಚ್. ನಾಗವೇಣಿ ಅವರ ನೀಳ್ಗತೆ 'ಕೊಡಿಮರ'. ಅದು ಮನಸ್ಸನ್ನು ಕಲಕಿಬಿಟ್ಟಿತು.

**ಕೆ.ಎಸ್. ರವಿಕುಮಾರ್, ಹಾಸನ**

'2 ನೇ ಕೂಗು' ಪತ್ತೇದಾರಿ ಕತೆ ನಿಜಕ್ಕೂ ಉತ್ತಮವಾಗಿತ್ತು. ಅದು ಒಂದು ಸಿನಿಮಾದ ತರಹ ಕುತೂಹಲ ಉಳಿಸಿಕೊಂಡು, ಓದಿಸಿಕೊಂಡು ಹೋಯಿತು. ಇದನ್ನು ಓದುತ್ತಿದ್ದಂತೆ, ಇಂಗ್ಲಿಷ್ ಭಾಷೆಯಲ್ಲಿ ಅಗಾಥಾ ಕ್ರಿಸ್ಟಿ ಬರೆಯುತ್ತಿದ್ದ ಪತ್ತೇದಾರಿ ಕತೆಗಳು ನೆನಪಾದವು. ಕನ್ನಡ ಪುಸ್ತಕಗಳನ್ನೇ ಓದದ ನನ್ನ ಮಕ್ಕಳು ಕೂಡಾ ಈ ಕತೆ ಇಷ್ಟ ಪಟ್ಟಿದ್ದಾರೆ. ಪತ್ತೇದಾರಿ ಕತೆಗಳನ್ನೇ ಬರೆಯುವ ಲೇಖಕರಿಂದ ಇನ್ನೂ ಹೆಚ್ಚು ಹೆಚ್ಚು ಈ ರೀತಿಯ ಕತೆಗಳನ್ನು ನಿರೀಕ್ಷಿಸುತ್ತೇವೆ.

**ಶಮ ಮನು**




ಉಷಾ ನರಸಿಂಹನ್ ಅವರ ಕತೆ 'ಹೊಸ ಜೀವನ ಡಾಟ್ ಕಾಂ' ಆಧುನಿಕ ಬದುಕನ್ನು ಹಿಡಿದಿಟ್ಟಿದೆ. ರಾಮಚಂದ್ರ ಭಾವೆ ಅವರ 'ಹುದಲು' ಕತೆ ವಾಸ್ತವದ ಚಿತ್ರಣವಾಗಿದೆ.

**ಸುಮಿತ್ರಾ, ಹೊಸಕೆರೆ, ಹುಬ್ಬಳ್ಳಿ**

'ಹೊಸ ಜೀವನ ಡಾಟ್ ಕಾಂ' ಕತೆ ತುಂಬ ಮನಸೆಳೆಯಿತು. 'ಮೆಟ್ಟುಗತ್ತಿ' ಪ್ರಬಂಧ ಲವಲವಿಕೆಯಿಂದ ಕೂಡಿದೆ.

**ಎಸ್.ಬಿ. ರೇವಣಕರ, ಧಾರವಾಡ**

ಸಂಚಿಕೆಯ ಮುಖಪುಟ ಆಕರ್ಷಕ. ಕರ್ಕಿ ಕೃಷ್ಣಮೂರ್ತಿ ಅವರ 'ವದ್ದಾ...' ಕತೆ ವೇಗವಾಗಿ ಓದಿಸಿಕೊಳ್ಳುತ್ತದೆ. ವಸುಮತಿ ಉಡುಪ ಅವರ 'ಮೆಟ್ಟುಗತ್ತಿ' ಪ್ರಬಂಧ ಹಳ್ಳಿ ಬದುಕನ್ನು ಚಿತ್ರಿಸಿದೆ.

**ನವ್ಯಾ ಎನ್. , ಹೊಸನಗರ**

ಈ ಸಂಚಿಕೆ ಇಷ್ಟವಾಯಿತು. ಎಲ್ಲಾ ಕತೆಗಳು ಚೆನ್ನಾಗಿವೆ. 'ಜಾತ್ರೆ' ಕವಿತೆ ನನ್ನ ಬಾಲ್ಯದ ಜಾತ್ರೆಯನ್ನು ನೆನಪಿಸಿತು

**ಎಸ್.ಕೆ. ಸುಮಾ ಶಿವಮೊಗ್ಗ**